**22–12–2016**

# ಕ್ರಿಸ್ತ ಜಯಂತಿಯ ಸಂದೇಶ

ಪ್ರಿಯರೇ, ಈ ಸಂತೋಷದ ಹಾಗು ಸಂಭ್ರಮದ ಆಚರಣೆಗೆ ಒಮ್ಮನಸ್ಸಿನಿಂದ ಆಗಮಿಸಿರುವ ತಮ್ಮೆಲ್ಲರನ್ನು ತುಂಬು ಹೃದಯದಿಂದ ಹಾಗು ಪ್ರಭು ಯೇಸುವಿನ ನಾಮದಲ್ಲಿ ಸ್ವಾಗತಿಸುತ್ತೇನೆ.

ಲೋಕದ ರಕ್ಷಣೆಗಾಗಿ ಹಾಗೂ ನಮ್ಮೆಲ್ಲರನ್ನು ಪಾಪದ ಬಂಧನದಿಂದ ಬಿಡುಗಡೆ ಮಾಡಲು ಧರೆಗೆ ಇಳಿದು ಬಂದ ದೇವರ ಏಕೈಕ ಪುತ್ರನಾದ ಪ್ರಭುವಿನ ಜನ್ಮ ದಿನವೇ ಕ್ರಿಸ್ಮಸ್ ಆಚರಣೆ. ಇದು ಎಲ್ಲರು ಒಟ್ಟುಗೂಡಿ ಆಚರಿಸುವಂತಹ ಆಚರಣೆ. ಏಕೆಂದರೆ ಪ್ರಭುಯೇಸು ಬಂದದ್ದು ಒಂದು ಜಾತಿ, ಜನಾಂಗದ ರಕ್ಷಣೆಗಲ್ಲ, ಪ್ರತಿಯೊಬ್ಬ ಮಾನವನಿಗಾಗಿ – ನಿಮಗಾಗಿ, ನನಗಾಗಿ. ಈ ಶುಭ ಗಳಿಗೆಯಲ್ಲಿ, ಸಹಬಾಂಧತ್ವದ ಹಾಗು ಐಕ್ಯತೆಯ ಆಚರಣೆಗೆ ನಮ್ಮ ಸಂತೋಷದಲ್ಲಿ ಪಾಲ್ಗೊಳ್ಳಲು ನೀವೆಲ್ಲರು ಬಂದಿರುವುದು ನಮಗೆ ಸಂತೋಷ ತಂದಿದೆ.

ಕ್ರಿಸ್ಮಸ್ ಆಚರಣೆ ದೇವರ ಪ್ರೀತಿಯ ಸಂಕೇತವನ್ನು ತೋರ್ಪಡಿಸುವಂತಹ ಆಚರಣೆ. ಯೊವಾನ್ನ 3:16 "ದೇವರು ಈ ಲೋಕವನ್ನು ಎಷ್ಟಾಗಿ ಪ್ರೀತಿಸಿದರೆಂದರೆ ತಮ್ಮ ಏಕೈಕ ಪುತ್ರನನ್ನೇ ಧಾರೆಯೆರೆದರು. ವಿಶ್ವಾಸವಿಟ್ಟ ಯಾರೂ ನಾಶವಾಗದೆ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂಬುದೇ ದೇವರ ಉದ್ದೇಶ". ನಿಜವಾದ ಕ್ರಿಸ್ಮಸ್ ಆಚರಣೆ ದೈವ ಪ್ರೀತಿಯ ಮೂಲಕ ಗೋಚರವಾಗುವುದು ಸತ್ಯಾನುಸತ್ಯ.

ದೇವರು ಮಾನವ ರೂಪ ತಾಳಿ, ಶಾಂತಿ ಮತ್ತು ಪ್ರೀತಿಯ ಸಾಮ್ರಾಜ್ಯವನ್ನು ಸ್ಥಾಪಿಸಲು, ಬಡ ಕುಟುಂಬದಲ್ಲಿ ಹುಟ್ಟಿ ದೀನದಲಿತರನ್ನು ಸಮಾನತೆಯಿಂದ ಕಾಣುತ್ತಾ, ಸ್ವಾರ್ಥ, ದ್ವೇಷ, ಶತ್ರು ಭಾವನೆಗಳೆಂಬ ಅಂಧಕಾರದ ದುರ್ಗುಣಗಳನ್ನು ನಿರ್ಮೂಲನ ಮಾಡುತ್ತಾ, ಭಕ್ತಿಪೂರ್ವಕ ಹಾಗು ಶುದ್ಧ ಹೃದಯದ ವ್ಯಕ್ತಿಗಳ ಜೀವನದಲ್ಲಿ ನೆಲೆಸಲು ಹಾಗು ಸ್ಫೂರ್ತಿಯ ಚಿಲುಮೆಯಾಗಲು ಈ ಧರಗೆ ಆಗಮಿಸಿದರು. ಆ ಶುಭ ಸಂದೇಶ ಪ್ರಥಮವಾಗಿ ಸ್ವೀಕರಿಸಿದ್ದು ಕುರುಬರು, ದೇವದೂತ ಕುರುಬರಿಗೆ ಕಾಣಿಸಿಕೊಂಡರು. ಬೆತ್ಲೆಹೇಮ್ ಊರಿನಲ್ಲಿ ದೇವರ ಪುತ್ರ ಜನಿಸಿದ್ದಾನೆ ಎಂಬ ಸಂದೇಶವನ್ನು ನೀಡುವುದರ ಮೂಲಕ ಪ್ರಭುಯೇಸು ಸರ್ವರ ಒಳಿತಿಗಾಗಿ ಆಗಮಿಸಿದ್ದಾರೆ ಎಂಬ ಸಂದೇಶವನ್ನು ವ್ಯಕ್ತಪಡಿಸುತ್ತಾರೆ. ಆದ್ದರಿಂದ ಈ ಆಚರಣೆ ನಮ್ಮೆಲ್ಲರನ್ನು ಎತ್ತರದ ಘಟ್ಟಕ್ಕೆ ಕರೆದೊಯ್ಯುತ್ತೆ!

ಬಡವರನ್ನು ಸಮಾನತೆಯಿಂದ ನೋಡಲು, ಹಂಚಿಕೊಂಡು ಬಾಳಲು, ಕೆಡುಕು ಮಾಡಿದವರನ್ನು ಕ್ಷಮಿಸಲು, ಶತ್ರುಗಳನ್ನು ಪ್ರೀತಿಸಲು, ಶಾಂತಿಯ ಸಾಮ್ರಾಜ್ಯವನ್ನು ಕಟ್ಟಲು, ನಕರಾತ್ಮಕ ಹಾಗು ಸ್ವಾರ್ಥ ಭಾವನೆಯನ್ನು ತೊಲಗಿಸಿ ಐಕ್ಯತೆಯ ಸಾಮ್ರಾಜ್ಯವನ್ನು ನಿರ್ಮಿಸಲು ಕರೆ ನೀಡುತ್ತದೆ. ಈ ಕಾರ್ಯಗಳನ್ನು ನಾವು ಒಮ್ಮನಸ್ಸಿನಿಂದ ಮಾಡಿದರೆ ಪ್ರಭು ನಮ್ಮ ಹೃದಯದಲ್ಲಿ ಜನಿಸುತ್ತಾರೆ. ಮೊದಲು ಪರರಲ್ಲಿ ಯೇಸುವನ್ನು ಕಂಡುಕೊಳ್ಳೋಣ. ಬಡ ಜನರನ್ನು ಸಮಾನತೆಯಿಂದ ಕಾಣೋಣ, ಅವರ ಸಂತೋಷವೇ ಯೇಸುವಿನ ಸಂತೋಷ.

ಕ್ರೈಸ್ತರಾದ ನಾವೆಲ್ಲರು ಪ್ರಭುವಿನ ಶುಭ ಸಮಾಚಾರವನ್ನು ಸಾರುತ್ತಾ ಅವರು ನಡೆದಂತಹ ಹಾದಿಯಲ್ಲಿ ನಡೆಯುತ್ತಾ, ಶಾಂತಿಯ ಸಾಮ್ರಾಜ್ಯದ ಸ್ಥಾಪನೆಗೆ ಶ್ರಮಿಸುತ್ತಿದ್ದೇವೆ. ನಮ್ಮ ಉದ್ದೇಶ ನಾವೆಲ್ಲರು ದೇವರ ಮಕ್ಕಳು ಎಂದು ತೋರಿಸಿಕೊಡುವುದು. ಕ್ರೈಸ್ತ ಸಮಾಜ ಹಲವಾರು ಶೋಷಣೆಗಳಿಗೆ, ಹಿಂಸೆಗಳಿಗೆ ಬಲಿಯಾಗುತ್ತಿದೆ. ಸಂವಿಧಾನದ ಪ್ರಸ್ತಾವನೆಯಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ಮೌಲ್ಯಗಳಿಗೆ ಆದ್ಯತೆ ನೀಡಿರುವುದು ನಮ್ಮ ದೇಶದ

ಹೆಮ್ಮೆಯ ಸಂಕೇತ. ಆದರೆ ಈ ಮೌಲ್ಯಗಳು ಕೇವಲ ಮೂಲಭೂತ ಧರ್ಮದ ಸ್ವತ್ತಾಗಿ ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಬೇಸರ ಮೂಡಿಸಿದೆ. ಕ್ರೈಸ್ತರ ದೇವಾಲಯಗಳ ಧ್ವಂಸ, ಕ್ರೈಸ್ತರ ಚಿತ್ರಹಿಂಸೆ ಇನ್ನೂ ಹಲವಾರು ರಾಜ್ಯಗಳಲ್ಲಿ ನಡೆಯುತ್ತಿರುವಾಗ, ನಮ್ಮ ಹಕ್ಕನ್ನು ಪಾಲಿಸುವುದು ಕಷ್ಟವಾಗುತ್ತಿದೆ. ಕ್ರೈಸ್ತರು ಶಾಂತಿ ಪ್ರಿಯರು ಹಾಗು ದೇಶಕಟ್ಟುವುದರಲ್ಲಿ ಸ್ಪಂಧಿಸುತ್ತಿದ್ದಾರೆ. ನಾವು ಸ್ವತಂತ್ರದಿಂದ ಜೀವಿಸಲು ಬಿಡಿ ಎಂಬ ಮನದಾಳದ ಮಾತುಗಳನ್ನು ಎಲ್ಲಾ ಅಧಿಕಾರಿಗಳೊಡನೆ ಕೇಳಿಕೊಳ್ಳುತ್ತೇನೆ. ಹಾಗೆಯೇ ಕರ್ನಾಟಕದ ಮಾನ್ಯ ಮುಖ್ಯ ಮಂತ್ರಿಗಳಿಗೆ ಮತ್ತು ಸರಕಾರಕ್ಕೆ ಕ್ರೈಸ್ತ ಮತ್ತು ಇತರ ಅಲ್ಪಸಂಖ್ಯಾತರಿಗೆ ಕೊಡುವ ಆದ್ಯತೆಗಾಗಿ ಧನ್ಯವಾದವನ್ನು ಸಲ್ಲಿಸುತ್ತೇನೆ.

ಕ್ರೈಸ್ತರ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರ ತೆಗೆದುಕೊಳ್ಳುತ್ತಿರುವಂತಹ ಅನೇಕ ಕಾರ್ಯಕ್ರಮಗಳಿಗೆ ನಾನೇ ವಂದನೆಯನ್ನು ಸಲ್ಲಿಸುತ್ತೇನೆ. ಆ ಸೌಲಭ್ಯಗಳು ಯಾವುದೇ ಅಡ್ಡಗೋಡೆಗಳಿಲ್ಲದೇ ಪ್ರತಿಯೊಬ್ಬರಿಗೂ ಕೂಡ ಸಿಗಲಿ ಎಂದು ಕೇಳಿಕೊಳ್ಳುತ್ತೇನೆ. ನಮ್ಮ ಹಕ್ಕುಗಳನ್ನು ಗೌರವಿಸಿ ನಮ್ಮ ವಿಶ್ವಾಸವನ್ನು ಪಾಲಿಸಲು ಸಹಕರಿಸಿ. ಈ ಸಣ್ಣ ಕವನದ ಪ್ರಾರ್ಥನೆಯ ಮೂಲಕ ನನ್ನ ಸಂದೇಶವನ್ನು ಸಮಾಪ್ತಿಗೊಳಿಸುತ್ತೇನೆ.

ಬೆತ್ಲೆಹೇಮಿನ ಬೆಳಕೆ – ನಮ್ಮ ಹೃದಯದಲ್ಲಿ ಬೆಳಗು,
ಶಾಂತಿಯ ಬೆಳಕೆ – ಸಮಾಜದ ಘಾಯಗಳನ್ನು ಗುಣಪಡಿಸಿ ಕ್ಷಮೆ
ಮತ್ತು ಶಾಂತಿಯ ಪಥವನ್ನು ತೋರು,
ಸಂತೋಷದ ಬೆಳಕೇ – ಅಂಧಕಾರವನ್ನು ನೀಗಿಸಿ, ನಮ್ಮ ಮನೆ, ರಾಜ್ಯ, ದೇಶದಲ್ಲಿ ನೆಲೆಸು,
ಸೌಖ್ಯದ ಬೆಳಕೇ – ಅಸ್ವಸ್ಥರಿಗೆ, ಬಂಧಿತರಿಗೆ, ಬಡವರಿಗೆ ಶಕ್ತಿನೀಡು,
ನಂಬಿಕೆಯ ಬೆಳಕೇ – ಹೊಸ ವರುಷದಲ್ಲಿ ದಾರಿದೀಪವಾಗು,
ಲೋಕದ ಬೆಳಕೇ – ಪ್ರೀತಿಸಲು ಮತ್ತು ಸೇವೆ ಮಾಡಲು ಕಲಿಸು.

ಮಗದೊಮ್ಮೆ ತಮಗೆಲ್ಲರಿಗೂ ಕ್ರಿಸ್ತ ಜಯಂತಿ ಹಾಗು ಹೊಸ ವರ್ಷದ ಶುಭಾಶಯಗಳು. ಪ್ರಭು ಯೇಸು ತಮ್ಮನ್ನು ಹೇರಳವಾಗಿ ಆಶೀರ್ವದಿಸಿ ಅವರ ವರಪ್ರಸಾದವನ್ನು ನಿಮ್ಮೆಲ್ಲರ ಮೇಲೂ, ಈ ರಾಜ್ಯದ ಜನರ ಮೇಲೂ ಸುರಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ನಮ್ಮ ಸಂತೋಷದಲ್ಲಿ ಪಾಲ್ಗೊಂಡ ತಮಗೆಲ್ಲರಿಗೂ ಶುಭ ನಮನಗಳು.

**ಅತಿ ವಂ. ಡಾ. ಬರ್ನಾಡ್ ಮೊರಾಸ್**
ಬೆಂಗಳೂರಿನ ಮಹಾಧರ್ಮಾಧ್ಯಕ್ಷರು